# ವಿಶ್ವನಂದಿನಿ ಲೇಖನಮಾಲೆ – 164

## ಪ್ರಭಾತಪಂಚಕಮ್

ಶಾಸ್ತ್ರಪ್ರಪದಲ್ಲಿಯೇ ಒಂದು ಅಪೂರ್ವಸುಪ್ರಭಾತ ಬರೆದ  ಮಹನೀಯರು,
ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾಂದಗಳವರು.



Sri Lakshmivallabha Theertharu
1632-1642 , Thirumakoodalu

ಹಿಂದಿನ ಲೇಖನದಲ್ಲಿ ಶ್ರೀಮದ್ ವ್ಯಾಸರಾಜಸಂಸ್ಥಾನದ ಅಧಿಪತಿಗಳಾದ ಶ್ರೀ ಜಗನ್ನಾಥತೀರ್ಥರ ಮಾಹಾತ್ಮ್ಯದ ಕುರಿತು ಅರಿತುಕೊಂಡೆವು. ಶ್ರೀ ಜಗನ್ನಾಥತೀರ್ಥರಗಿಂತಲೂ ನಾಲ್ಕು ತಲೆಮಾರು ಹಿಂದಿನವರಾದ ಶ್ರೀ ಲಕ್ಷ್ಮೀವಲ್ಲಭತೀರ್ಥರ ಕುರಿತ ಲೇಖನ ಇಂದಿನದ್ದು.

ಶ್ರೀಮದ್ ವ್ಯಾಸರಾಜಸಂಸ್ಥಾನದಲ್ಲಿ ಶ್ರೀಮಚ್ಚಂದ್ರಿಕಾಚಾರ್ಯರಿಂದ ಐದನೆಯವರು ಶ್ರೀ ಕಂಬಾಲೂರು ರಾಮಚಂದ್ರತೀರ್ಥರು. ಶ್ರೀಮದ್ ವ್ಯಾಸರಾಜ ಸಂಸ್ಥಾನದ ಸಂಪ್ರದಾಯಗಳನ್ನು ಬರೆದಿಟ್ಟ ಧೀಮಂತರು.  ಶ್ರೀಮನ್ ನ್ಯಾಯಸುಧಾಕ್ಕೆ ವ್ಯಾಖ್ಯಾನ ಬರೆದ ಮಹಾಜ್ಞಾನಿಗಳು.  ಸಾವಿರಾರು ಸಜ್ಜೀವಗಳಿಗೆ ವೈಷ್ಣವದೀಕ್ಷೆ ನೀಡಿದ ಮಹಾತಪಸ್ವಿಗಳು. ಅವರ ಶಿಷ್ಯರು ಶ್ರೀ ಲಕ್ಷ್ಮೀವಲ್ಲಭತೀರ್ಥರು.

ನಾವು ದೇವರಿಗೆ ಸುಪ್ರಭಾತವನ್ನು ಹಾಡುತ್ತೇವೆ. ಬೇರೆಬೇರೆಯ ಕ್ಷೇತ್ರದ ದೇವರಿಗೆ, ದೇವತೆಗಳಿಗೆ ಸುಪ್ರಭಾತವನ್ನು ಹಾಡುತ್ತೇವೆ. ಗುರುಗಳಿಗೆ

ಸುಪ್ರಭಾತವನ್ನು ಹಾಡುತ್ತೇವೆ. ನೂರಾರು ಜನ ಮಹಾನುಭಾವರು ವಿವಿಧ ರೀತಿಯಲ್ಲಿ ತುಂಬ ಸುಂದರವಾದ ಸುಪ್ರಭಾತಗಳನ್ನು ಬರೆದಿದ್ದಾರೆ.

ಆದರೆ, ಎಂದಿಗೂ ಚಿಂತಾ ಸಂತಾಪಗಳಿಲ್ಲದ ಭಗವಂತನಿಗೆ ನಿತ್ಯವೂ ಸುಪ್ರಭಾತವೇ. ಅವನ ಆರಾಧನೆಯನ್ನೇ  ಬದುಕಿನ ಕಾಯಕವನ್ನಾಗಿಸಿಕೊಂಡ ದೇವತೆಗಳಿಗೂ ನಿತ್ಯವೂ ಸುಪ್ರಭಾತವೇ. ಅವನನ್ನು ಹೃದಯದಲ್ಲಿ ಸಾಕ್ಷಾತ್ಕರಿಸಿಕೊಂಡ ಗುರುಗಳಿಗೂ ನಿತ್ಯ ಸುಪ್ರಭಾತವೇ. ಆದರೆ, ಮಾಡಬಾರದ್ದನ್ನು ಮಾಡುವ, ಯೋಚಿಸಬಾರದ್ದನ್ನು ಯೋಚಿಸುವ ನಮಗೇ ಕೆಟ್ಟ ದಿವಸಗಳ ಭಯವಿರುವದು. ಕೆಟ್ಟ ಆಲೋಚನೆಗಳಿಂದ ಮಲಗುವ ನಾವು ಕೆಟ್ಟ ಆಲೋಚನಗಳಿಂದಲೇ ಎದ್ದು ನಮ್ಮ ಪ್ರಭಾತವನ್ನು ಕುಪ್ರಭಾತವನ್ನಾಗಿ ಮಾಡಿಕೊಳ್ಳುತ್ತೇವೆ, ನಮ್ಮ ದಿವಸಗಳನ್ನು ಕುದಿನಗಳನ್ನಾಗಿ ಮಾಡಿಕೊಳ್ಳುತ್ತೇವೆ.

ಹೀಗಾಗಿ, ವಸ್ತುತಃ ಸುಪ್ರಭಾತದ ಹಾರೈಕೆ ಬೇಕಾಗಿರುವದು ನಮಗೆ. ನಮಗೆ

ಸುಪ್ರಭಾತವಾಗಲಿ ಎನ್ನುವ ಕಾರಣಕ್ಕೇ ನಾವು ದೇವರಿಗೆ, ದೇವತೆಗಳಿಗೆ, ಗುರುಗಳಿಗೆ ಸುಪ್ರಭಾತವನ್ನು ಹೇಳುತ್ತೇವೆ. ಅವರಿಗೆ ಸುಪ್ರಭಾತವನ್ನು ಹೇಳುವದರಿಂದಲೇ ನಮಗೂ ಸುಪ್ರಭಾತದ ಸುದಿವಸಗಳ ಸೌಭಾಗ್ಯಗಳು ಒದಗಿ ಬರುತ್ತವೆ ಎಂದು.

ಹೀಗೆ ಸುಪ್ರಭಾತವನ್ನು ಹಾಡುವ ಉದ್ದೇಶವೇ ನಮ್ಮ ದಿವಸ ಸುದಿವಸವಾಗಲಿ, ನಮಗೆ ಸುಪ್ರಭಾತವಾಗಲಿ ಎಂದು.

ಶ್ರೀ ವಾಮನಪುರಾಣದಲ್ಲಿ ರುದ್ರದೇವರು ಹೇಳಿರುವ ಈ ರೀತಿಯ ಒಂದು ಸುಪ್ರಭಾತವಿದೆ. ನಮಗೆ ನಾವೇ ಹೇಳಿಕೊಳ್ಳುವ ಸುಪ್ರಭಾತ. ದೇವತೆಗಳನ್ನು, ಋಷಿಗಳನ್ನು, ಲೋಕಾಭಿಮಾನಿ, ಪಂಚಭೂತಾಭಿಮಾನಿ ದೇವತೆಗಳನ್ನು, ನವಗ್ರಹಗಳನ್ನು ಸ್ಮರಿಸಿ ನಮ್ಮ ದಿನವನ್ನು ಆರಂಭಿಸಿಕೊಳ್ಳುವ ಸುಪ್ರಭಾತ.

ಈ ಸೂಕ್ಷ್ಮವನ್ನು, ಮತ್ತು ವಾಮನಪುರಾಣ ತಿಳಿಸುವ ಮಹಾಧರ್ಮವನ್ನು  ತಿಳಿದ ಶ್ರೀ

ಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರು ಐದು ಪದ್ಯಗಳ ಒಂದು ಸುಪ್ರಭಾತವನ್ನು ನಮಗಾಗಿ ಬರೆದು ನೀಡಿದ್ದಾರೆ. ನಮಗೆ ನಾವು ಸುಪ್ರಭಾತ ಹೇಳಿಕೊಳ್ಳುವ ರೀತಿಯನ್ನು, ನಮ್ಮ ದಿವಸ ಸುದಿನವಾಗಲಿ ಎಂದು ಭಗವಂತನನ್ನು ಬೇಡುವ ರೀತಿಯನ್ನು ಹೇಳಿಕೊಟ್ಟಿದ್ದಾರೆ ಆ ಮಹಾನುಭಾವರು.

ಈ ಸ್ತೋತ್ರಕ್ಕೆ ಪ್ರಭಾತಪಂಚಕ ಎಂದು ಹೆಸರು. ಐದು ಸುಪ್ರಭಾತಗಳು, ಕಡೆಗೆ ಎರಡು ಶ್ಲೋಕಗಳು. ಒಟ್ಟು ಏಳು ಶ್ಲೋಕಗಳ ಪುಟ್ಟಕೃತಿ. (ಇದನ್ನು ಲಕ್ಷ್ಮೀವಲ್ಲಭತೀರ್ಥರಾದ ಲಕ್ಷ್ಮೀನಾಥತೀರ್ಥರು ಬರೆದಿರುವದು ಎಂದು ಕೆಲವರು ಬರೆದಿದ್ದಾರೆ. ಅದು ತಪ್ಪು. ಸ್ತೋತ್ರದ ಕೊನೆಯಲ್ಲಿ "ರಾಮಚಂದ್ರಾರ್ಯಶಿಷ್ಯೇಣ ಲಕ್ಷ್ಮೀವಲ್ಲಭಭಿಕ್ಷುಣಾ । ಪ್ರಭಾತಪಂಚಕಸ್ತೋತ್ರಂ ಕೃತಂ ಮಂಗಲಕಾರಕಮ್" ಎಂದು ಸ್ಪಷ್ಟವಾಗಿ ಇದು ಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರ ರಚನೆ ಎಂದಿದೆ.)

ಐದು ಸುಪ್ರಭಾತಗಳನ್ನು ಹೇಳಿಕೊಡುವ ಈ ಸ್ತೋತ್ರದ ಐದನೆಯ ಸುಪ್ರಭಾತ ಮಾತ್ರ ಪರಮ ಪರಮಾದ್ಭುತವಾದ ಸುಪ್ರಭಾತ. ಈ ಸುಪ್ರಭಾತ ನಮಗೊದಗಿದರೆ ನಮ್ಮ ದಿವಸವಷ್ಟೇ ಅಲ್ಲ ನಮ್ಮ ಇಡಿಯ ಜೀವನವೇ ಸಾರ್ಥಕವಾಗಿಬಿಡುತ್ತದೆ.

**ಶ್ರೀಮಧ್ವಭಾಷ್ಯಾಣಿ ಜಯಾರ್ಯಟೀಕಾಃ**
**ಶ್ರೀ ವ್ಯಾಸತೀರ್ಥಾರ್ಯನಿಬಂಧನಾನಿ ।**
**ಶ್ರೀರಾಮಚಂದ್ರಾರ್ಯಕೃತಪ್ರಬಂಧಾಃ**
**ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।।**

**ಶ್ರೀಮಧ್ವಭಾಷ್ಯಾಣಿ ಕುರ್ವಂತು ಮಮ ಸುಪ್ರಭಾತಮ್ ।**

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿರುವ ಭಾಷ್ಯಗಳು ನನಗೆ ಸುಪ್ರಭಾತವನ್ನುಂಟುಮಾಡಲಿ. ಪ್ರತೀದಿವಸ ಬೆಳಿಗ್ಗೆ ಏಳುತ್ತಲೇ "ನಿರ್ದೋಷಪೂರ್ಣಗುಣವಿಗ್ರಹ ಆತ್ಮತಂತ್ರೋ ನಿಶ್ಚೇತನಾತ್ಮಕಶರೀರಗುಣೈಶ್ಚ ಹೀನಃ" ಎಂಬುವ ಶ್ರೀಮದಾಚಾರ್ಯರ ಪರಮಮಂಗಳ ವಾಣಿ ನಮ್ಮ ಮನಸ್ಸಿನಲ್ಲಿ

ಮೂಡಿದರೆ, "ಯಥೋದಯೋ ರವೇರ್ಭವೇತ್ ಸದೋದಿತಸ್ಯ" ಎಂಬ ಚಿಂತನೆ ನಮ್ಮ ಅಂತರ್ಯಾಮಿಯ ಕುರಿತು ನಮ್ಮ ಮನಸ್ಸಿನಲ್ಲಿ ಮೂಡಿದರೆ ಬದುಕು ಬಂಗಾರವಾಗಿಬಿಡುತ್ತದೆ. ಎಚ್ಚರವಾಗುವ ಸಮಯಕ್ಕೆ ಮತ್ತ್ಯಾವುದೂ ಮನಸ್ಸಿನಲ್ಲಿರಬಾರದು – ಏಳತ್ತಿದ್ದಂತೆಯೇ ಆಚಾರ್ಯರ ವಾಕ್ಯಗಳು, ಆಚಾರ್ಯರು ಹೇಳಿಕೊಟ್ಟ ಅನುಸಂಧಾನಗಳು, ಆಚಾರ್ಯರು ಹೇಳಿಕೊಟ್ಟ ಉಪಾಸನೆಗಳು ಮನಸ್ಸಿನಲ್ಲಿ ಮೂಡಬೇಕು.

## ಶ್ರೀ ಜಯಾರ್ಯಟೀಕಾಃ ಕುರ್ವಂತು ಮಮ ಸುಪ್ರಭಾತಮ್ ।

ಆಚಾರ್ಯರ ವಾಕ್ಯಗಳನ್ನು ಬಾಯಿಪಾಠ ಮಾಡಿ ಬೆಳಿಗ್ಗೆ ಎದ್ದು ಹೇಳುವದಲ್ಲ. ಆ ವಾಕ್ಯಗಳ ಅರ್ಥಾನುಸಂಧಾನ ಮನಸ್ಸಿನಲ್ಲಿ ಮೂಡಬೇಕು. ಶ್ರೀ ವಾದಿರಾಜರು ಹೇಳಿದಂತೆ ಭಾಷ್ಯವಾಕ್ಯಗಳು ಎಂದರೆ ನಾರಾಯಣ, ಟೀಕಾವಾಕ್ಯಗಳು ಎಂದರೆ ಲಕ್ಷ್ಮೀದೇವಿ. ನಾರಾಯಣನೊಟ್ಟಿಗೇ ಲಕ್ಷ್ಮೀದೇವಿಯನ್ನು ನೆನೆಯಬೇಕು. ಲಕ್ಷ್ಮಿಯೊಟ್ಟಿಗೇ

ಶ್ರೀಹರಿಯನ್ನು ನೆನೆಯಬೇಕು. ಅವರಿಬ್ಬರಿಗೆ ಎಂದಿಗೂ — ಕ್ಷಣದ ಅನಂತಾಂಶದಲ್ಲಿಯೂ — ವಿಯೋಗವನ್ನು ಚಿಂತಿಸಬಾರದು. ಹಾಗೆ, ಶ್ರೀಮದಾಚಾರ್ಯರ ವಾಕ್ಯಗಳು ಮನಸ್ಸಿನಲ್ಲಿ ಮೂಡುತ್ತಿದ್ದಂತೆಯೇ ಟೀಕಾಕೃತ್ಪಾದರು ಹೇಳಿರುವ ಅರ್ಥ ಮನಸ್ಸಿನಲ್ಲಿ ಬರಬೇಕು. ನಿರ್ದೋಷಪೂರ್ಣಗುಣವಿಗ್ರಹ ಎನ್ನುವ ತಾತ್ಪರ್ಯನಿರ್ಣಯದ ವಾಕ್ಯದ ಅರ್ಥ ಟೀಕಾಕೃತ್ಪಾದರ ನ್ಯಾಯಸುಧಾಗ್ರಂಥದಲ್ಲಿ, ತತ್ವಪ್ರಕಾಶಿಕೆಯಲ್ಲಿ, ತತ್ವನಿರ್ಣಯದ ವ್ಯಾಖ್ಯಾನದಲ್ಲಿದೆ. ಆ ಮಾತುಗಳ ಅನುಸಂಧಾನ ಮನಸ್ಸಿನಲ್ಲಿ ಮೂಡಬೇಕು. ಟೀಕಾಕೃತ್ಪಾದರು ಬರೆದಿರುವ ಆ ಗ್ರಂಥರಾಶಿಯನ್ನು ಕಣ್ಮುಂದೆ ತಂದುಕೊಂಡು, ಮೇರುಪರ್ವತದಷ್ಟು ಎತ್ತರದ, ಭೂಮಿಯಷ್ಟು ವಿಶಾಲವಾಗಿರುವ, ಸಮುದ್ರದಷ್ಟು ಗಂಭೀರವಾದ ಆ ಗ್ರಂಥಗಳ ಅಧ್ಯಯನ ಸದಾ ನನ್ನಿಂದ ನಡೆಯಲಿ ಎಂಬ ಪ್ರಾರ್ಥನೆ ಮನಸ್ಸಿನಲ್ಲಿ ಒಡಮೂಡಬೇಕು.

## ಶ್ರೀ ವ್ಯಾಸತೀರ್ಥಾರ್ಯನಿಬಂಧನಾನಿ ಕುರ್ವಂತು ಮಮ ಸುಪ್ರಭಾತಮ್ ।

ಶ್ರೀಮದಾಚಾರ್ಯರು ತತ್ವವನ್ನು ತಿಳಿಸಿದರು. ಟೀಕಾಕೃತ್ಪಾದರು ಅರ್ಥವನ್ನು ಹೇಳಿದರು. ಶ್ರೀಮದಾಚಾರ್ಯರು ಹೇಳಿದ್ದೇ ತತ್ವ, ಟೀಕಾಕೃತ್ಪಾದರು ಹೇಳಿದ್ದೇ ಅರ್ಥ ಮತ್ತೊಂದಲ್ಲ ಎಂದು ಈ ಜಗತ್ತಿನಲ್ಲಿ ಸುಸ್ಥಿರವಾಗಿ ಪ್ರತಿಷ್ಠಾಪಿಸಿದವರು ಶ್ರೀಮಚ್ಚಂದ್ರಿಕಾಚಾರ್ಯರು. ಭಗವತ್ಪಾದರ, ಟೀಕಾಕೃತ್ಪಾದರ ವಚನಗಳ ನಿರ್ದೋಷತೆಯನ್ನು ನಮಗೆ ಮನಗಾಣಿಸಿದವರು. ಅವುಗಳೊಳಗೆ ಇರುವ ಅರ್ಥವ್ಯಾಪ್ತಿಯ ಪರಿಚಯ ಮಾಡಿಸಿದವರು. ಹೀಗಾಗಿ "ಯಥಾರ್ಥಂ ಪ್ರಮಾಣಮ್" ಎಂಬ ಆಚಾರ್ಯರ ವಾಕ್ಯ, "ಯಥಾವಸ್ಥಿತಜ್ಞೇಯವಿಷಯೀಕಾರಿತ್ವಂ ಪ್ರಾಮಾಣ್ಯಮ್" ಎಂಬ ಟೀಕಾಕೃತ್ಪಾದರ ವ್ಯಾಖ್ಯಾನ ಶ್ರೀ ಚಂದ್ರಿಕಾಚಾರ್ಯರು ತರ್ಕತಾಂಡವದಲ್ಲಿ ತೋರಿದ ವಿಸ್ತೃತವಾದ ಅರ್ಥವಿವರಣೆಯೊಂದಿಗೇ ನಮ್ಮ ಮನಸ್ಸಿನಲ್ಲಿ ಮೂಡಬೇಕು. ಆಗ ದಿವಸವಲ್ಲ, ಬದುಕಲ್ಲ, ನಮ್ಮ

ಅನಂತಾನಂತ ಜನ್ಮಗಳು ಸಾರ್ಥಕವಾಗಿಬಿಡುತ್ತವೆ.

## ಶ್ರೀರಾಮಚಂದ್ರಾರ್ಯಕೃತಪ್ರಬಂಧಾಃ ಕುರ್ವಂತು ಮಮ ಸುಪ್ರಭಾತಮ್ ।

ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರಿಗೆ ಪಾಠ ಹೇಳಿದ, ಪ್ರಣವೋಪದೇಶ ಮಾಡಿ ಸಂನ್ಯಾಸಪ್ರದಾನ ಮಾಡಿದ ಗುರುಗಳು ಶ್ರೀ ಕಂಬಾಲೂರು ರಾಮಚಂದ್ರತೀರ್ಥರು. ಅವರು ಬರೆದ ವ್ಯಾಖ್ಯಾನಗಳು ನನಗೆ ಸುಪ್ರಭಾತವನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತಾರೆ, ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರು.

ಬಹಳ ಅದ್ಭುತವಾದ ಪ್ರಾರ್ಥನೆ.

ಭಗವತ್ಪಾದರ ಭಾಷ್ಯಗಳು, ಟೀಕಾಕೃತ್ಪಾದರ ಟೀಕಾಗ್ರಂಥಗಳು, ಚಂದ್ರಿಕಾಚಾರ್ಯರ ಮಹಾಪ್ರಬಂಧಗಳು ನಮಗೆ ಅರ್ಥವಾಗುವದೇ ನಮ್ಮ ಗುರುಗಳಿಂದ ಅಲ್ಲವೇ. ರಾಮಶಬ್ದದಿಂದ ನಮಗೆ ಪಾಠವನ್ನು ಹೇಳಿ, ಅರ್ಥವಾಗದ್ದನ್ನು

ಹತ್ತತ್ತು ಬಾರಿ ಪಾಠ ಹೇಳಿ, ತಾವು ಅಪಾರ ಜ್ಞಾನದವರಾದರೂ ನಮ್ಮ ಎತ್ತರಕ್ಕೆ ತಕ್ಕಂತೆ ನಮಗೆ ತತ್ವವನ್ನು ತಿಳಿಹೇಳಿ ಭಗವತ್ತತ್ವವನ್ನು ಅರ್ಥಮಾಡಿಸುವ ಗುರುಗಳಿಗಿಂತ ಮಿಗಿಲಾದ ಬಂಧುಗಳು ಆಪ್ತರು ನಮಗುಂಟೇ? ಹೀಗಾಗಿ ಒಂದೊಂದು ವಾಕ್ಯವನ್ನು ನೆನಪಿಸಿಕೊಳ್ಳಬೇಕಾದರೂ ನಮ್ಮ ಗುರುಗಳು ಈ ವಾಕ್ಯದ ಅರ್ಥವನ್ನು ಈ ರೀತಿಯಾಗಿ ಮಾಡಿಸಿದ್ದರು ಎಂಬ ಅವರ ಕಾರುಣ್ಯದ ಚಿಂತನೆಯೊಂದಿಗೇ ನಾವು ಆಚಾರ್ಯರ, ಟೀಕಾಕೃತ್ಪಾದರ, ಚಂದ್ರಿಕಾಚಾರ್ಯರ ವಾಕ್ಯಗಳನ್ನು ನೆನಪಿಸಿಕೊಳ್ಳಬೇಕು. ಅದಕ್ಕಾಗಿ ಗುರುಗಳ ಸ್ಮರಣೆಯನ್ನು ಮಾಡಿದರು ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರು.

## ಸರ್ವೇ (ತತ್ವವಾದಪ್ರಬಂಧಾಃ) ಕುರ್ವಂತು ಮಮ ಸುಪ್ರಭಾತಮ್ ।

ಮತ್ತೂ, ಈ ಭಾಷ್ಯ, ಟೀಕಾ, ಉದ್ಗ್ರಂಥಗಳ ಅರ್ಥವಾಗಬೇಕಾದರೆ ಶ್ರೀ ರಾಘವೇಂದ್ರಸ್ವಾಮಿಗಳು ಮುಂತಾದ

ಮಹಾನುಭಾವರು ಬರೆದ ಟಿಪ್ಪಣಿಗಳನ್ನು ಆಶ್ರಯಿಸಬೇಕು. ಇಡಿಯ ಜೀವನವನ್ನು ಈ ಗ್ರಂಥಗಳ ಅಧ್ಯಯನಕ್ಕೆ ಮುಡುಪಾಗಿಟ್ಟು ಒಂದೊಂದು ಅಕ್ಷರದ, ಪ್ರಮೇಯದ ಉಪಾಸನೆಯನ್ನು ಮಾಡಿ ಆ ಮಹಾನುಭಾವರು ಗ್ರಂಥಗಳನ್ನು ರಚಿಸಿದ್ದಾರೆ.

ಹಾಗೆಯೇ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ರಚಿಸಿದ ವಾಯುಸ್ತುತಿಯಿಂದಾರಂಭಿಸಿ, ಶ್ರೀ ವಾದಿರಾಜರು, ಶ್ರೀ ವಿಜಯೀಂದ್ರಗುರುರಾಜರು, ಶ್ರೀ ರಘೂತ್ತಮರು, ಶ್ರೀ ರಾಘವೇಂದ್ರಪ್ರಭುಗಳು, ಶ್ರೀ ಶೇಷಚಂದ್ರಿಕಾಚಾರ್ಯರು, ಪುರಂದರದಾಸರು, ವಿಜಯದಾಸರು, ಗೋಪಾಲದಾಸರು, ಶ್ರೀ ಜಗನ್ನಾಥದಾಸರು ಮುಂತಾದ ಸಮಸ್ತಜ್ಞಾನಿಗಳು ರಚಿಸಿರುವ ಏನು ಗ್ರಂಥರಾಶಿಯಿವೆ, ಅವೆಲ್ಲವೂ ನಮಗೆ ಸುಪ್ರಭಾತವನ್ನುಂಟುಮಾಡಲಿ.

ಹೀಗೆ ನಮ್ಮ ಗುರುಗಳಿಂದ ಆರಂಭಿಸಿ ಶ್ರೀ ರಾಘವೇಂದ್ರಸ್ವಾಮಿಗಳವರೆಗಿನ ಎಲ್ಲ ಟಿಪ್ಪಣೀಕಾರರು, ವ್ಯಾಸತ್ರಯೀ ಎಂಬ ಅದ್ಭುತ ಭದ್ರಕೋಟೆಯನ್ನು ನಿರ್ಮಿಸಿದ

ಶ್ರೀಮಚ್ಚಂದ್ರಿಕಾಚಾರ್ಯರು, ತಮ್ಮ ಮಿತವಾದ ಶಬ್ದಗಳಿಂದಲೇ ಸಮಗ್ರ ಶಬ್ದವಾಙ್ಮಯಕ್ಕೆ ವ್ಯಾಖ್ಯಾನ ಮಾಡಿದ ಶ್ರೀಮಟ್ಟೀಕಾಕೃತ್ಪಾದರು, ಕಲಿಯುಗದಲ್ಲಿ ಹುಟ್ಟಿಬಂದ ನಮಗೂ ನಮ್ಮ ಅಂತರ್ಯಾಮಿಯನ್ನು ದರ್ಶನ ಮಾಡಿಸುವ ಭಾಷ್ಯಗ್ರಂಥಗಳನ್ನು ರಚಿಸಿದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು, ಇವರೆಲ್ಲರಲ್ಲಿ ನಿಂತು ಗುರುವಾಗಿ ಮೆರೆಯುವ ಮೂಲಗುರುವಾದ ಶ್ರೀ ವೇದವ್ಯಾಸದೇವರು ಬೆಳಿಗ್ಗೆ ಏಳುತ್ತಿರುವಂತೆ ನಮ್ಮ ಮನಃಪಟಲದಲ್ಲಿ ಕಾಣಿಸಿಕೊಳ್ಳಬೇಕು. ಅವರ ವಾಕ್ಯಗಳು ನಮ್ಮ ಮನಸ್ಸಿಗೆ ಗೋಚರವಾಗಬೇಕು. ಆ ವಾಕ್ಯಗಳ ಅರ್ಥ ನಮ್ಮ ಬುದ್ಧಿಯಲ್ಲಿ ಒಡಮೂಡಬೇಕು. ಆಗ ಸುಪ್ರಭಾತ. ಅದು ಸುದಿನ. ಆ ಜೀವನ ಸಾರ್ಥಕ. ಅಂಥ ಸಾರ್ಥಕ ಸುಪ್ರಭಾತವನ್ನು ಕರುಣಿಸಲಿ ಎಂಬ ಪ್ರಾರ್ಥನೆಯನ್ನು ಹೇಳಿಕೊಡುತ್ತಿದ್ದಾರೆ ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರು.

ದೇವರಿಗೆ ಸುಪ್ರಭಾತ ಹಾಡಿದವರುಂಟು, ದೇವತೆಗಳಿಗೆ ಹಾಡಿದವರುಂಟು, ಗುರುಗಳಿಗೆ ಹಾಡಿದವರುಂಟು. ಆದರೆ ನಮಗೆ ಸುಪ್ರಭಾತವನ್ನು

ನಾವೇ ಹಾಡಿಕೊಳ್ಳುವ ಪರಿಯನ್ನು ಅದರಲ್ಲಿಯೂ ಒಂದು ಸರ್ವೋತ್ತಮವಾದ ಚಿಂತನೆಯನ್ನು ಬೆಳಗಿನ ಕಾಲದಲ್ಲಿ ನಮಗೆ ನೀಡಿದ ವಿದ್ಯಾಕರ್ಣಾಟಕಸಿಂಹಾಸನಾಧೀಶ್ವರರಾದ ಶ್ರೀಮದ್ವ್ಯಾಸರಾಜಸಂಸ್ಥಾನದ ಭೂಷಾಮಣಿಗಳಾದ ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರಿಗೆ ಸಮಗ್ರ ಜೀವದ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸೋಣ.

ಪುಷ್ಯ ಶುದ್ಧ ಪಂಚಮಿಯಂದು ಅವರ ಆರಾಧನೆ. ಮೈಸೂರಿನ ತಿರುಮಕೂಡಲಿನ ಕಾವೇರಿ, ಕಪಿಲಾ, ಸ್ಫಟಿಕಸರೋವರಗಳ ಸಂಗಮಕ್ಷೇತ್ರದಲ್ಲಿ ಅವರ ವೃಂದಾವನವಿದೆ. (ಬೇಲೂರಿನಲ್ಲಿದ್ದ ಅವರ ವೃಂದಾವನವನ್ನು ರಕ್ಷಣೆಯ ದೃಷ್ಟಿಯಿಂದ ತಿರುಮಕೂಡಲಿಗೆ ಸ್ಥಳಾಂತರಿಸಲಾಗಿದೆ)  ಆ ಮಹಾನುಭಾವರ ಸ್ಮರಣೆಯನ್ನು ಮಾಡಿ, ನಮಗೆ ಪ್ರತೀದಿವಸವೂ ಗುರು-ದೇವತಾ-ಹರಿಯ ಸ್ಮರಣೆಯಿಂದ ಸುಪ್ರಭಾತವಾಗಲಿ, ಮಧ್ವಶಾಸ್ತ್ರದ ಅಧ್ಯಯನದಿಂದ ದಿವಸಗಳು ಸುದಿನವಾಗಲಿ, ಮಧ್ವಸಿದ್ಧಾಂತದ ಪದ್ಧತಿಯ ಅನುಷ್ಠಾನದಿಂದ

ಜೀವನ ಸಾರ್ಥಕವಾಗಲೆಂದು ಅನುಗ್ರಹಿಸಿ ಎಂದು ಪ್ರಾರ್ಥಿಸಿಕೊಳ್ಳೋಣ.

ಈ ದಿವಸವೇ, ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಈ ಶ್ಲೋಕವನ್ನು ಬಾಯಿಪಾಠ ಮಾಡಿ, ಪಂಚಮಿಯಂದು ಆ ಗುರುಗಳನ್ನು ಸ್ಮರಣೆ ಮಾಡಿ ಅವರಿಗೆ ಸಮರ್ಪಿಸಿ.

ಪ್ರತೀದಿವಸ ಬೆಳಿಗ್ಗೆ ಏಳುತ್ತಿದ್ದಂತೆ ನಮ್ಮ ಬಾಯಲ್ಲಿ ಬರಬೇಕಾದಂತಹ ಶ್ಲೋಕ —

**ಶ್ರೀಮಧ್ವಭಾಷ್ಯಾಣಿ ಜಯಾರ್ಯಟೀಕಾಃ**
**ಶ್ರೀ ವ್ಯಾಸತೀರ್ಥಾರ್ಯನಿಬಂಧನಾನಿ ।**
**ಶ್ರೀರಾಮಚಂದ್ರಾರ್ಯಕೃತಪ್ರಬಂಧಾಃ**
**ಕುರ್ವಂತು ಸರ್ವೇ ಮಮ ಸುಪ್ರಭಾತಮ್ ॥**

ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದರೆ ಮೊದಲಾದ ಎಲ್ಲ ಗುರುಗಳ ಅನುಗ್ರಹದಿಂದ ಎಲ್ಲ ಸಜ್ಜನರ ಬದುಕಿನಲ್ಲಿ ಪ್ರತಿದಿವಸವೂ ಸುಪ್ರಭಾತವಾಗಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491